ಇವರು ಪ್ರಯತ್ನ ಮಾಡಿರಬಹುದು, ಆದರೆ ಇವರು ಕೇಂದ್ರ ಸರ್ಕಾರದ ಪರವಾಗಿ ವಕಾಲತ್ತು ವಹಿಸಿ ಇಲ್ಲಿ ಗಲಾಟೆ ಮಾಡುತ್ತಿದ್ದಾರೆ. ಇದನ್ನು ಅವರು ಕೈ ಬಿಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬ ಒತ್ತಡವನ್ನು ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಕೇಳುತ್ತಿದ್ದಾರೆ. ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ನಾವು ಹೇಳತಕ್ಕಂಥಾದ್ದು ಇಷ್ಟೆ, ಈಗಾಗಲೇ ನಾವು ಎರಡು ದಿವಸ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಹೊಸ ಸೂತ್ರ ಅಥವಾ ಮತ್ತೊಂದು ವಿಚಾರದಲ್ಲಿ ನೀವು ಎಷ್ಟೇ ಚರ್ಚೆ ಮಾಡಿದರೂ ಸಹ ಈ ಸದನದಲ್ಲಿ ಆಂಶಿಮ ನಿರ್ಣಯಕ್ಕೆ ಬರುವುದು ಕಷ್ಟವಾಗಬಹುದೆಂಬ ಒಂದು ಅಭಿಪ್ರಾಯ ಸಹ ಇದೆ. ಅದಕ್ಕೆ ತಮ್ಮ ಅಭಿಪ್ರಾಯವೂ ಕೂಡ ಅದೇ ರೀತಿ ಇದೆ ಎಂದು ನಾನು ಭಾವಿಸಿದ್ದೇನೆ, ಇವತ್ತು ತಮ್ಮನ್ನು ಬಿಟ್ಟು ಮಾಡಬೇಕೆನ್ನುವ ವಿಚಾರ ನಮ್ಮದಲ್ಲ. ಇವತ್ತು ಕರ್ನಾಟಕ ರಾಜ್ಯದ ರೈತರ ಸಾಲವು ರೈತರುಗಳಿಗೆ ಹೊರೆಯಾಗಿದೆ. ಅವರುಗಳಿಗೆ ಸಾಲ ಪಜಾ ಆಗಬೇಕೆನ್ನುವ ಅಭಿಪ್ರಾಯವನ್ನು ಇಟ್ಟುಕೊಂಡೇ ಮಾನ್ಯ ಮುಂಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಸಭ್ಯಾಧ್ಯಕ್ಷರೇ, ಇದರ ಬಗ್ಗೆ ಖಾಸಗಿ ಮಾನ್ಯ ಯಡಿಯೂರಪ್ಪನವರನ್ನು ಹಾಗೂ ರೈತ ಸಂಘದ ಮುಖಂಡರುಗಳನ್ನು, ವಿರೋಧ ಪಕ್ಷದ ನಾಯಕರುಗಳನ್ನು ಕರೆದು ಚರ್ಚೆ ಮಾಡಬಹುದು. ನಮ್ಮ ಕಡೆಯಿಂದ ಮುಖ್ಯ ಮಂತ್ರಿಗಳು ಇರುತ್ತಾರೆ. ಇಲ್ಲಿ ಚರ್ಚೆ ಮಾಡುವುದರಿಂದ ಉಪಯೋಗವಾಗಲಾರದೆಂದು ಮಾನ್ಯ ವಿರೋಧ ಪಕ್ಷದ ಉಪ ನಾಯಕರ ಅಭಿಪ್ರಾಯ ಸಹ ಆಗಿದೆ. ಅಂದರೆ ನಿಮಗೆ ಚರ್ಚೆ ಮಾಡಲು ಬರುವುದಿಲ್ಲ ಎಂದು ಅರ್ಥವಲ್ಲ. ನೀವು ಬಿರೀ ಬಾಷಣ ಮಾಡುವುದರಿಂದ...

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಬಂಗಾರಪ್ಪನವರು ಒಂದು ನಿಮಿಷ ಯೀಲ್ಡ್ ಆಗುವ ಹಾಗಿದ್ದರೆ ಒಂದು ವಿಚಾರ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಚರ್ಚೆ ಮಾಡುವುದರಿಂದ ಏನೂ ಉಪಯೋಗ ವಾಗುವುದಿಲ್ಲವೆಂದಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಸಹ ಕೇಂದ್ರ ಸರ್ಕಾರ ಮಾಡಿರುವ ಯೋಜನೆಯಿಂದ ಏನೂ ಉಪಯೋಗವುದಿಲ್ಲವೆಂದು ಹೇಳಿದ್ದಾರೆ. ಅವರು ಹೇಳಿರುವುದರಲ್ಲಿ ಯಾವುದು ಭಿನ್ನಾಭಿಪ್ರಾಯವಿಲ್ಲ, ಶೇಕಡ ೫೫ ಜನ ರೈತರುಗಳಿಗೆ ಅದರಿಂದ ಉಪಯೋಗವಾಗಬಹುದು. ಬಡವರುಗಳಿಗೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಅದರಿಂದ ಸರ್ಕಾರವು ಇದರ ಬಗ್ಗೆ ಒಂದುರೆ ಸೆಲ್ಯೂಷನ್‌ನ್ನು ಪಾಸ್ ಮಾಡಿ ರೈತರುಗಳಿಗೆ ಯಾವುದೇ ರೀತಿಯು ಉಪಯೋಗವಾಗುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ನಾವು ೧೭ ಜನ ಗೆದ್ದು ಬಂದಿದ್ದೇವೆ, ನಾವು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡುವ ಅಗತ್ಯವಿಲ್ಲವೆಂದು ಹೇಳಿದರೆ, ನಾವು ನಮ್ಮ ಕಾರ್ಯಕ್ರಮಗಳನ್ನು ಜೇರೆ ತರಹದಲ್ಲಿ ರೂಪಿಸುತ್ತೇವೆ. ಕೇಂದ್ರ ಸರ್ಕಾರ ಮಾಡಿರುವ ಯೋಜನೆಯಿಂದ ಬಡ ರೈತನಿಗೆ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ. ನಾವುಗಳೆಲ್ಲರೂ ಸೇರಿ ಚರ್ಚೆ ಮಾಡಿ ಈ ಯೋಜನೆಯು ಈ ರೀತಿ ಇದ್ದರೆ ಇದರಿಂದ ರೈತೆರಂಗಳಿಗೆ ಅನುಕೂಲವಾಗುತ್ತದೆಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸೋಣ. ಹಣಕಾಸಿನ ಸಹಾಯಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರುಗಳನ್ನು ಕರೆದುಕೊಂಡು ಪ್ರಧಾನಿಯವರ ಮನ ಒಲಿಸುವ ಕೆಲಸವನ್ನು ಮಾಡೋಣ. ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟ ತಕ್ಷಣ ಎಲ್ಲರೂ ಚಪ್ಪಾಳಿ ತಟ್ಟುವುದಲ್ಲ. ಈ ಯೋಜನೆಯಿಂದ ೧೨೦ ಕೋಟಿ ರೂಪಾಯಿಗಳ ಭಾರ ರಾಜ್ಯದ ಮೆಲೆ ಬೀಳುತ್ತದೆಂದು ಹೇಳುವುದಾದರೆ ಅದರ ವಿವರವನ್ನು ಕೊಡಿ. ಕೇಂದ್ರದ ೧೨೦ ಕೋಟಿ ಮತ್ತು ನಿಮ್ಮ ೧೨೦ ಕೋಟಿ ಬಗ್ಗೆ ವಿವರಗಳನ್ನು ಕೊಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಈ ವಿಚಾರದಲ್ಲಿ ಸಾಕಾದಷ್ಟು ಸಲಹೆಗಳನ್ನು ಕೇಳಿದ್ದೇನೆ. ಈಗ ಸದನವು ಮುಂದುವರಿದು ಮತ್ತೆ ಎರಡು ಗಂಟೆ ಐದು ನಿಮಿಷಕ್ಕೆ ಸಮಾವೇಶವಾಗುತ್ತದೆ.

(ಸದನವನ್ನು ೧ ಗಂಟೆ ೭ ನಿಮಿಷಕ್ಕೆ ಮುಂದೂಡಲಾಯಿತು.)

(೨ ಗಂಟೆ ೨೩ ನಿಮಿಷಕ್ಕೆ ಸದನ ಮತ್ತೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠದಲ್ಲಿದ್ದರು)

(ಬಿ.ಜೆ.ಪಿ. ಸದಸ್ಯರು ಧರಣಿ ಕುಳಿತಿದ್ದರು)

ಉಪಾಧ್ಯಕ್ಷರು.— ಈಗ ಗಘನ ಸೆಳೆಯುವ ಸೂಚನೆಗಳು. ಮೊದಲನೆಯದಾಗಿ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಎಲ್. ಆರ್. ಶಿವರಾಮೇಗೌಡ ಮತ್ತು ಟಿ. ಬಿ. ಜಯಚಂದ್ರ ಅವರುಗಳು ತೋಟಗಾರಿಕೆ ಮಂತ್ರಿಗಳ ಗಮನ ಸೆಳೆಯುವುದು...